# ಸುದ್ದಿ ಸಂಚಯ

## ದಕ್ಷಿಣ ಆಫ್ರಿಕದಲ್ಲಿ ರಾಮಕೃಷ್ಣ-ವಿವೇಕಾನಂದ ವೇದಾಂತ ಆಂದೋಲನ

ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿರುವ ರಾಮಕೃಷ್ಣ ಕೇಂದ್ರವು ಸುಮಾರು ೬೦ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿರುವ ಸುಸಜ್ಜಿತವಾದ ಕೇಂದ್ರವಾಗಿದೆ. ಆಫ್ರಿಕನ್ನರ ಸಮಾಜ ರಚನೆ ಮತ್ತು ಅಲ್ಲಿನ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿರುವ ಈ ಕೇಂದ್ರವು, ರಾಮಕೃಷ್ಣ ವಿವೇಕಾನಂದರ ಆಂದೋಲನ ಅಲ್ಲಿನ ಜನತೆಯ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿರುವುದಕ್ಕೆ ಒಂದು ನಿದರ್ಶನವಾಗಿದೆ. ಅಲ್ಲಿನ ಶ್ರೀರಾಮಕೃಷ್ಣ-ಭಕ್ತರು, ತಮ್ಮ ಪರಿಶ್ರಮ ಮತ್ತು ಪ್ರೀತಿಪೂರ್ವಕ ಸೇವೆಯನ್ನು ಸಲ್ಲಿಸಿ, ಈ ಕೇಂದ್ರವು ಅಲ್ಲಿ ಅನೇಕ ಜನಪರ ಸೇವಾಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲು ಕಾರಣರಾಗಿದ್ದಾರೆ. ಸಾಪ್ತಾಹಿಕ ಸತ್ಸಂಗಗಳು, ಉಚಿತ ವೈದ್ಯಕೀಯ ಸೇವೆಯಲ್ಲಿ ತೊಡಗಿಸಿಕೊಂಡಿರುವುದೇ ಅಲ್ಲದೆ ಅಲ್ಲಿರುವ ಮಕ್ಕಳ ಅನಾಥಾಲಯಗಳಿಗೆ ಎಲ್ಲ ರೀತಿಯ ನೆರವನ್ನೂ ಈ ಕೇಂದ್ರ ನೀಡುತ್ತಿದೆ— ಅನಾಥಾಲಯಕ್ಕಾಗಿ ಎರಡು ಕಟ್ಟಡಗಳ ನಿರ್ಮಾಣದ ಹೊಣೆಯನ್ನೂ ಈ ಕೇಂದ್ರ ತೆಗೆದುಕೊಂಡಿದೆ.

ಅದೇ ರೀತಿ ಶ್ರೀಶಾರದಾದೇವಿ ಆಶ್ರಮ ಎಂಬ ಮಹಿಳಾ ಘಟಕವೂ ಸಹ ಸುಸಜ್ಜಿತವಾದ ಪ್ರಾರ್ಥನಾಲಯ ಹಾಗೂ ಸಭಾಂಗಣವನ್ನು ಹೊಂದಿದ್ದು ಅಲ್ಲಿನ ಜನತೆಯ ಆಧ್ಯಾತ್ಮಿಕ ಬೇಡಿಕೆಗಳನ್ನು ಪೂರೈಸುತ್ತಿದೆ. ಪ್ರವ್ರಾಜಿಕ ಇಷ್ಟಪ್ರಾಣ ಅವರ ನೇತೃತ್ವದಲ್ಲಿ ಅತ್ಯಂತ ದಕ್ಷವಾದ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವ ಈ ಕೇಂದ್ರ ಸಂಪೂರ್ಣ ಸ್ವಾವಲಂಬಿಯೂ ಹಾಗೂ ಸ್ವತಂತ್ರವೂ ಆಗಿದೆ.

ಇತ್ತೀಚೆಗೆ ರಾಮಕೃಷ್ಣ ಕೇಂದ್ರದ ಉಸ್ತುವಾರಿಯನ್ನು ನೋಡಿಕೊಳ್ಳಲು ಕಲ್ಕತ್ತದ ರಾಮಕೃಷ್ಣ ಮಿಷನ್ನಿನಿಂದ ಅಲ್ಲಿಗೆ ತೆರಳಿದ ಸ್ವಾಮಿ ಬ್ರಹ್ಮೇಶಾನಂದಜೀಯವರಿಗೆ ಅಲ್ಲಿನ ಜನತೆ ಹಾರ್ದಿಕ ಸ್ವಾಗತ ನೀಡಿತು. ವಿವಿಧ ಸ್ಥಳಗಳಲ್ಲಿ ಏರ್ಪಡಿಸಲಾಗಿದ್ದ ಅವರ ಉಪನ್ಯಾಸಗಳಿಗೆ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಬಂದು ನೆರೆಯುತ್ತಿದ್ದರು. "ರಾಮಕೃಷ್ಣ ಭಾವಾಂದೋಲನದಲ್ಲಿ ಗೃಹಸ್ಥರ ಪಾತ್ರ ಮತ್ತು ಹೊಣೆ" "ದೇವರ ಮಾತೃತ್ವ" "ಧರ್ಮ, ಶ್ರದ್ಧೆ ಮತ್ತು ವೈದ್ಯೋಪಚಾರ" ಹಾಗೂ "ದೈನಂದಿನ ಜೀವನದಲ್ಲಿ ಯೋಗ" ಇವೇ ಮುಂತಾದ ವಿಷಯಗಳ ಮೇಲೆ ಅವರು ಮಾತನಾಡಿದರು. ದಕ್ಷಿಣ ಆಫ್ರಿಕಾದ ಪ್ರಸಾರ ನಿಗಮವು ಅವರೊಡನೆ ಸಂದರ್ಶನಗಳನ್ನು ನಡೆಸಿ ಅವನ್ನು ರೇಡಿಯೊ ಮತ್ತು ಟಿವಿ ಮೂಲಕ ಬಿತ್ತರಿಸಿತು. ಅಲ್ಲಿ ಅವರ ಉಪಸ್ಥಿತಿಯಲ್ಲಿ ನಡೆದ ಸತ್ಸಂಗದಲ್ಲಿ ೪೦೦ ಭಕ್ತರು ಭಾಗವಹಿಸಿದ್ದರು. ನ್ಯೂಕ್ಯಾಸಲ್ ಎಂಬ ಪಟ್ಟಣದಲ್ಲಿ ನಡೆದ ಹಿಂದೂಧರ್ಮ ಸಮ್ಮೇಳನದಲ್ಲಿಯೂ ಅವರು ಭಾಗವಹಿಸಿದ್ದರು. ಅದರಲ್ಲಿ ೩೫೦ ಜನ ಸದಸ್ಯರು ಭಾವಹಿಸಿದ್ದರು. ದಕ್ಷಿಣ ಆಫ್ರಿಕಾದಲ್ಲಿರುವ ವಿವಿಧ ರಾಮಕೃಷ್ಣ ಕೇಂದ್ರಗಳಿಗೆ ಅವರು ಭೇಟಿಯಿತ್ತು ಹಲವು ಉಪನ್ಯಾಸಗಳನ್ನು ನೀಡಿದರು. ❖

## ಶ್ರೀಲಂಕಾದ ರಾಮಕೃಷ್ಣ ಮಿಷನ್, ಬಟಿಕೋಲ ಕೇಂದ್ರದ ಅಮೃತಮಹೋತ್ಸವ ಸಂದರ್ಭದಲ್ಲಿ ವಿಶೇಷ ಸ್ಟ್ಯಾಂಪ್ ಬಿಡುಗಡೆ




ಕಳೆದ ಅಕ್ಟೋಬರ್ ೧೯ರಂದು ಕೊಲಂಬೊದ ರಾಮಕೃಷ್ಣ ಮಿಷನ್ನಿನ ಕೇಂದ್ರದಲ್ಲಿ ಶ್ರೀಲಂಕಾ ಸರ್ಕಾರದ ಅಂಚೆ ಮತ್ತು ದೂರವಾಣಿ ಸಂಪರ್ಕಗಳ ಸಚಿವರು ವಿಶೇಷ ಸ್ಟ್ಯಾಂಪ್ ಒಂದನ್ನು ಬಿಡುಗಡೆ ಮಾಡಿದರು.

ಕೊಲಂಬೊ ಕೇಂದ್ರದ ಉಪಶಾಖೆಯಾದ ಬಟಿಕೋಲ ಕೇಂದ್ರದ ಅಮೃತ ಮಹೋತ್ಸವದ ಅಂಗವಾಗಿ ಈ ಸ್ಟ್ಯಾಂಪ್‌ನ್ನು ಬಿಡುಗಡೆ ಮಾಡಲಾಯಿತು. ೭೫ ವರ್ಷಗಳಿಂದ ಶ್ರೀಲಂಕಾದಲ್ಲಿ ರಾಮಕೃಷ್ಣ ವಿವೇಕಾನಂದ ವೇದಾಂತವನ್ನು ಅನೇಕ ರೀತಿಯಲ್ಲಿ ಕಾರ್ಯರೂಪಕ್ಕಿಳಿಸಿರುವ ಕೊಲಂಬೊ ಮತ್ತು ಬಟಿಕೋಲ ಕೇಂದ್ರಗಳಲ್ಲಿ ಪ್ರಾರ್ಥನಾ ಮಂದಿರ, ಮಕ್ಕಳಿಗಾಗಿ ಸಾಂಸ್ಕೃತಿಕ ಕೇಂದ್ರಗಳೇ ಅಲ್ಲದೆ ಕುಷ್ಠರೋಗಿಗಳ ಸೇವೆ, ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುವುದು ಹಾಗೂ ಶಾಲಾ ಪುಸ್ತಕ ಮತ್ತು ಸಮವಸ್ತ್ರಗಳನ್ನು ಉಚಿತವಾಗಿ ಒದಗಿಸುವ ಅನೇಕ ಸೇವಾಕಾರ್ಯಗಳು ನಡೆಯುತ್ತಿವೆ. ❖

**ಓದುಗರಲ್ಲಿ ವಿನಂತಿ**

**ಈ ಪತ್ರಿಕೆಯ ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಪವಿತ್ರ ಯಾತ್ರೆ ಎಂಬ ಕಥೆಯ ನಿರೂಪಣೆ ಟಾಲ್‌ಸ್ಟಾಯ್ ರವರ ಕಥೆಯನ್ನು ಆಧರಿಸಿದೆ. ಪ್ರಮಾದದಿಂದಾಗಿ ಈ ಅಂಶವನ್ನು ಪ್ರಸ್ತಾಪಿಸದೆ ಇದ್ದುದಕ್ಕಾಗಿ ವಿಷಾದಿಸುತ್ತೇವೆ.**